# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 326 |
| ವಿಧಾನಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು |
| ಉತ್ತರಿಸುವ ದಿನಾಂಕ | : | 10-12-2020 |

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳೆಷ್ಟು; ಈ ವರ್ಗದ ಕೈಗಾರಿಕೆಗಳ ಬಗ್ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಇತ್ತೀಚೆಗೆ ನಡೆಸಿರುವ ಸಮೀಕ್ಷೆ/ಗಣತಿ ಪ್ರಕಾರ ಈ ವಲಯದಲ್ಲಿ ಒದಗಿಸಿರುವ ಹುದ್ದೆಗಳೆಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು) | ಕರ್ನಾಟಕ ರಾಜ್ಯದಲ್ಲಿ 30/6/2020 ರ ಅಂತ್ಯದವರೆಗೆ ಒಟ್ಟು 8,75,336 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನೊಂದಣಿಯಾಗಿರುತ್ತವೆ. ಇವುಗಳಲ್ಲಿ 60,21,569 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿರುವುದಾಗಿ ಕೈಗಾರಿಕೆಗಳು ನೊಂದಾಯಿಸಿರುತ್ತವೆ. **(ಅನುಬಂಧ- 1 ರಲ್ಲಿ ಜಿಲ್ಲಾವಾರು ಘಟಕಗಳ ಮಾಹಿತಿ ಇರಿಸಿದೆ)** |
| (ಆ) | ಕೋವಿಡ್ ಸೋಂಕು-19 ಹರಡುವಿಕೆ ಹಿನ್ನಲೆಯಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸಿದ ನಿಯಮಗಳ ಹಿನ್ನಲೆಯಲ್ಲಿ ರಾಜ್ಯದಲ್ಲಿ ಬಾಧಿತವಾದ ಒಟ್ಟು ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು; ಈ ಬಗ್ಗೆ ರಾಜ್ಯ ಸರ್ಕಾರ ಅಧಿಕೃತವಾಗಿ ಸಮೀಕ್ಷೆ ನಡೆಸಿದೆಯೇ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ಮಾರ್ಚ್ 2020 ರಲ್ಲಿ ಕೋವಿಡ್-19 ರ ಲಾಕ್‌ಡೌನ್ ನಿಂದಾಗಿ ಅಗತ್ಯ ಸೇವೆಗಳ ಕೈಗಾರಿಕೆಗಳನ್ನು ಹೊರತು ಪಡಿಸಿ ಎಲ್ಲಾ ಕೈಗಾರಿಕೆಗಳು ತಮ್ಮ ಚಟುವಟಿಕೆಯನ್ನು ಸ್ಥಗಿತಗೊಳಿಸಲು ಭಾರತ ಸರ್ಕಾರವು ಆದೇಶಿಸಿತ್ತು. ನಂತರ ಹಂತ ಹಂತವಾಗಿ ಲಾಕ್‌ಡೌನ್ ತೆರವು ಗೊಳಿಸಿದ ನಂತರ ಈ ಕೈಗಾರಿಕೆಗಳು ತಮ್ಮ ಚಟುವಟಿಕೆಯನ್ನು ಪ್ರಾರಂಭಿಸಿರುತ್ತವೆ. ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತವಾಗಿ ನಿಖರವಾದ ಸಮೀಕ್ಷೆಯನ್ನು ನಡೆಸಿರುವುದಿಲ್ಲ. ಆದರೆ ಒಂದು ಅಂದಾಜಿನ ಪ್ರಕಾರ ಶೇ 95% ಕೈಗಾರಿಕೆಗಳು ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸಿದ್ದು ಶೇ 92% ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. |

(ಇ) ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ, ವ್ಯಾಪಾರ–ವಹಿವಾಟು, ಸಾಲ, ಸರ್ಕಾರದಿಂದ ಶೇರು ತುಂಬುವುದು ಮತ್ತು ಸಾಲ ಖಾತ್ರಿ ಆರ್ಥಿಕ ನೆರವು ಅಡಿಯಲ್ಲಿ ರಾಜ್ಯಕ್ಕೆ ದೊರೆತಿರುವ ಆರ್ಥಿಕ ನೆರವು ಎಷ್ಟು; ಆರ್ಥಿಕ ನೆರವನ್ನು ಯಾವ ಯಾವ ಇಲಾಖೆಯ ಮುಖೇನ ಕೈಗಾರಿಕೆಗಳಿಗೆ ಒದಗಿಸಲಾಗಿದೆ?

ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ ಈ ಕೆಳಗಿನ ನೆರವು ದೊರೆತಿದೆ:

ಭಾರತ ಸರ್ಕಾರವು "ಇ.ಸಿ.ಎಲ್.ಜಿ"– ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು ಇದರನ್ವಯ ಫೆಬ್ರವರಿ 2020 ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ 20% ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಇದರಡಿಯಲ್ಲಿ ಇದುವರೆಗೆ ಬ್ಯಾಂಕ್‌ಗಳು ನೀಡಿರುವ ಸಾಲದ ವಿವರಗಳು ಈ ಕೆಳಗಿನಂತಿವೆ:–

| | ಒಟ್ಟು ಘಟಕಗಳು | ಒಟ್ಟು ಸಾಲದ ಮೊತ್ತ (ರೂ.ಲಕ್ಷಗಳಲ್ಲಿ) | ಶೇಕಡಾವಾರು |
|---|---|---|---|
| ಅರ್ಹವಿರುವ ಖಾತೆಗಳು | 3,00,459 | 10,69,527 | |
| ಸಾಲ ಮಂಜೂರಾತಿ | 2,03,014 | 8,02,953 | 75.08% |
| ಸಾಲ ಬಿಡುಗಡೆ | 1,46,409 | 6,66,116 | 62.28% |

ಕರ್ನಾಟಕ ಸರ್ಕಾರವು ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಈ ಕೆಳಗಿನ ನೆರವು ಕಲ್ಪಿಸಿದೆ:–

1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವಿದ್ಯುತ್ ಶುಲ್ಕಕ್ಕೆ ಸಂಬಂಧಿಸಿದಂತೆ, ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.

2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1.00 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/–

| | |
|---|---|
| 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ | ಶೇ 1% ರಿಯಾಯಿತಿ |
| 6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ | ಶೇ 0.5% ರಿಯಾಯಿತಿ |
| 15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ | ಯಾವುದೇ ರಿಯಾಯಿತಿ ಇರುವುದಿಲ್ಲ |

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.

4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್ ಮತ್ತು ಮೇ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

| | |
|---|---|
| ಏಪ್ರಿಲ್ 2020 ತಿಂಗಳ ಕಂತು | ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |
| ಮೇ 2020 ತಿಂಗಳ ಕಂತು | ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |
| ಜೂನ್ 2020 ತಿಂಗಳ ಕಂತು | ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |

ಸಿಐ 124 ಸಪ್ರಕೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

## ಅನುಬಂಧ-1

ಶ್ರೀ ಕೆ.ಎ.ತಿಪ್ಪೇಸ್ವಾಮಿ, ವಿಧಾನ ಪರಿಷತ್ ಸದಸ್ಯರು (ನಾಮನಿರ್ದೇಶನ ಹೊಂದಿದವರು) ಇವರ ಪ್ರಶ್ನೆ ಸಂ.368 (326) ಇವರ ಪ್ರಶ್ನೆಗೆ ಉತ್ತರ

| | ಜಿಲ್ಲೆ | ಘಟಕಗಳ ಸಂಖ್ಯೆ | ಬಂಡವಾಳ ಹೂಡಿಕೆ ರೂ.ಲಕ್ಷಗಳಲ್ಲಿ | ಉದ್ಯೋಗಿಗಳ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 19,009 | 1,50,113 | 86,010 |
| 2 | ಬಳ್ಳಾರಿ | 29,754 | 3,91,791 | 1,83,234 |
| 3 | ಬೆಳಗಾವಿ | 87,840 | 6,84,013 | 3,93,079 |
| 4 | ಬೆಂಗಳೂರು-ನ | 2,14,555 | 37,02,906 | 21,69,212 |
| 5 | ಬೆಂಗಳೂರು-ಗ್ರಾ | 63,293 | 12,46,687 | 5,72,024 |
| 6 | ಬೀದರ್ | 12,656 | 1,13,374 | 79,653 |
| 7 | ಚಾಮರಾಜನಗರ | 4,527 | 33,522 | 25,821 |
| 8 | ಚಿಕ್ಕಮಗಳೂರು | 14,057 | 81,425 | 58,887 |
| 9 | ಚಿಕ್ಕಬಳ್ಳಾಪುರ | 4,584 | 75,969 | 29,010 |
| 10 | ಚಿತ್ರದುರ್ಗ | 17,900 | 1,30,928 | 94,522 |
| 11 | ದಕ್ಷಿಣಕನ್ನಡ | 42,441 | 3,43,626 | 2,78,075 |
| 12 | ದಾವಣಗೆರೆ | 12,817 | 1,62,901 | 63,675 |
| 13 | ಧಾರವಾಡ | 53,062 | 4,39,159 | 2,91,728 |
| 14 | ಗದಗ | 8,232 | 61,572 | 39,105 |
| 15 | ಹಾಸನ | 18,758 | 1,22,052 | 91,321 |
| 16 | ಹಾವೇರಿ | 9,777 | 77,871 | 42,422 |
| 17 | ಕಲಬುರುಗಿ | 24,456 | 1,65,487 | 1,16,824 |
| 18 | ಕೊಡಗು | 5,740 | 40,269 | 35,535 |
| 19 | ಕೋಲಾರ | 19,959 | 2,14,412 | 1,40,342 |
| 20 | ಕೊಪ್ಪಳ | 7,365 | 1,23,577 | 40,864 |
| 21 | ಮಂಡ್ಯ | 15,210 | 1,09,055 | 78,030 |
| 22 | ಮೈಸೂರು | 45,938 | 3,90,685 | 2,71,426 |
| 23 | ರಾಯಚೂರು | 16,081 | 1,94,904 | 97,714 |
| 24 | ರಾಮನಗರ | 7,150 | 1,72,240 | 63,264 |
| 25 | ಶಿವಮೊಗ್ಗ | 27,142 | 1,56,974 | 1,35,648 |
| 26 | ತುಮಕೂರು | 36,348 | 3,72,239 | 2,14,433 |
| 27 | ಉಡುಪಿ | 12,882 | 1,99,671 | 1,03,683 |
| 28 | ಉತ್ತರಕನ್ನಡ | 18,866 | 1,10,453 | 94,693 |
| 29 | ವಿಜಯಪುರ | 22,269 | 1,49,711 | 1,18,383 |
| 30 | ಯಾದಗಿರಿ | 2,668 | 38,237 | 12,952 |
| | **ಒಟ್ಟು** | **8,75,336** | **1,02,55,821** | **60,21,569** |